ಹರಿಕ್ಷೇತ್ರದಿಂದ ಹರಕ್ಷೇತ್ರಕ್ಕೆ

ಸ್ವಾಮಿ ಕರುಣಾಕರಾನಂದ

ತೀರ್ಥಯಾತ್ರೆಯ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದರೂ, ಅದರ ಹಿಂದಿರುವ ಭಾವ ಮಾತ್ರ ಸನಾತನವಾಗಿಯೇ ಇರುತ್ತದೆ. ನಮ್ಮ ಧಾರ್ಮಿಕ ಶ್ರದ್ಧೆಯನ್ನು ದೃಢಗೊಳಿಸಲು ಇರುವ ಅನೇಕ ಸಾಧನಗಳಲ್ಲಿ ಸುಲಭವೆನಿಸಿರುವ ಸಾಧನ ಇದು. ಗೃಹಸ್ಥ ಹಾಗೂ ಸಂನ್ಯಾಸಿಗಳಿಬ್ಬರನ್ನೂ ತನ್ನೆಡೆಗೆ ಆಕರ್ಷಿಸುವ ಮತ್ತು ಪುಣ್ಯಾರ್ಜನೆ, ಪಾಪವಿಮೋಚನೆಗಳಿಗೆ ಉಪಕರಣಗಳಾಗಿರುವ ತೀರ್ಥಕ್ಷೇತ್ರಗಳು ಭಗವಂತನ ಅನುಗ್ರಹಶಕ್ತಿಯ ಅಭಿವ್ಯಕ್ತಿಗಳೇ ಸರಿ. ತಮ್ಮ ದಿವ್ಯತೆಯನ್ನು ಅಭಿವ್ಯಕ್ತಗೊಳಿಸಲು ಪರಮಗುರುವಾದ ಭಗವಂತನಿಂದ ಹಿಡಿದು, ಸಾಮಾನ್ಯನವರೆಗೆ ತಪಸ್ಸು ಮಾಡಿದ ಸ್ಥಳಗಳು, ಈ ತೀರ್ಥಕ್ಷೇತ್ರಗಳು. ನಮ್ಮ ದಿವ್ಯತೆಯನ್ನು ಯಾವುದಾದರೂ ಒಂದು ರೀತಿಯಲ್ಲಿ ನೆನಪಿಸಿಕೊಡುತ್ತ ಹಂತಹಂತವಾಗಿ ನಮ್ಮನ್ನು ಕ್ಷೇತ್ರ (ದೇಹ)ದ ಅಭಿಮಾನದಿಂದ ಕ್ಷೇತ್ರಜ್ಞನವರೆಗೆ 'ದಾಟಿಸು'ವುದರಿಂದ ಅವುಗಳು 'ತೀರ್ಥ'ವೆನಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಈ ತೀರ್ಥಕ್ಷೇತ್ರಗಳು ನದಿಯ ತೀರ, ಗಹನವಾದ ಕಾನನ, ಪರ್ವತಪ್ರದೇಶಗಳನ್ನು ಅವಲಂಬಿಸಿಕೊಂಡೇ ಇರುತ್ತವೆ. ಮನುಷ್ಯನ ಧಾರ್ಮಿಕ ಹಸಿವಿನ ಜೊತೆಜೊತೆಗೆ ಅವನ ಸೌಂದರ್ಯಾರಾಧನೆಗೂ ಈ ಸ್ಥಳಗಳು ಅವಕಾಶವೀಯುತ್ತವೆ. ತೀರ್ಥಯಾತ್ರೆಯಿಂದ ಇನ್ನೊಂದು ಪ್ರಯೋಜನವೂ ಇದೆ: ಈ ಸ್ಥಳಗಳಿಗೆ ಬೇರೆ ಬೇರೆ ಕಡೆಗಳಿಂದ ಬರುವ ಜನರಿಗೆ, ಸ್ಥಳೀಯ ನಿವಾಸಿಗಳ ಪರಿಚಯ ಮಾಡಿಕೊಳ್ಳುವ ಅವಕಾಶ ಸಿಗುತ್ತದೆ. ಹಾಗೆಯೇ ಅಲ್ಲಿನ ಜನರ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಆ ಮೂಲಕ ಸಹಬಾಳ್ವೆಯ ಪಾಠವನ್ನು ಕಲಿಯಲು ಸಾಧ್ಯವಾಗುತ್ತದೆ.

ಅದು ಹಾಗಿರಲಿ. ಈ ವರ್ಷದ (೨೦೧೩) ಮೇ ತಿಂಗಳಲ್ಲಿ ನೇಪಾಳದಲ್ಲಿರುವ ಮುಕ್ತಿನಾಥಕ್ಕೂ, ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿರುವ ಮಣಿಮಹೇಶಕ್ಕೂ ಯಾತ್ರೆ ಮಾಡುವ ಮನಸ್ಸು ಬಂತು. ಇದರಲ್ಲಿ ಮೊದಲನೆಯದು ವಿಷ್ಣುಕ್ಷೇತ್ರವಾದರೆ, ಎರಡನೆಯದು ಶಿವಕ್ಷೇತ್ರ. ಹೀಗಾಗಿ ನನ್ನ ಯಾತ್ರೆಯ ಬರಹದ ಶೀರ್ಷಿಕೆ **'ಹರಿಕ್ಷೇತ್ರದಿಂದ ಹರಕ್ಷೇತ್ರಕ್ಕೆ'** ಎನ್ನುವುದು ಅನ್ವರ್ಥವಾದುದೇ ಸರಿ.

ಎಲ್ಲೆ ದಾಟಿದ್ದು: ಮೇ ೧ ರಂದು ಬೆಂಗಳೂರಿನ ಯಶವಂತಪುರದಿಂದ ಲಕ್ನೋವಿಗೆ ರೈಲಿನಲ್ಲಿ ಪಯಣ ಮಾಡಿ, ಮೇ ೩ ರಂದು ಲಕ್ನೋವಿನ ರಾಮಕೃಷ್ಣ ಆಶ್ರಮಕ್ಕೆ ಹೋದೆನು. ಅಮೃತಶಿಲೆಯಲ್ಲಿ ನಿರ್ಮಾಣಗೊಂಡು, ಎದುರಿಗಿರುವ ರಸ್ತೆಯಿಂದ ಹಂತಹಂತವಾಗಿ ಮೇಲ್ಮಟ್ಟಕ್ಕೆ ಏರಿ ನಿಂತಿದೆ, ಶ್ರೀರಾಮಕೃಷ್ಣರ ಸುಂದರ ದೇವಾಲಯ. ಗರುಡ, ಸಿಂಹ, ವೃಷಭ ಹಾಗೂ ಆನೆಗಳ ಜೋಡಿಗಳು ಪ್ರತಿ ಹಂತದಲ್ಲಿಯೂ ವಿರಾಜಮಾನವಾಗಿದ್ದು,

ಆಧ್ಯಾತ್ಮಿಕ ಸಾಧನೆಗಳಲ್ಲಿ ತೀರ್ಥಯಾತ್ರೆಗೆ ಬಹಳ ಮಹತ್ವವಿದೆ. ತೀರ್ಥಕ್ಷೇತ್ರಗಳು ನಮ್ಮ ಆಧ್ಯಾತ್ಮಿಕ ಆಕಾಂಕ್ಷೆಯನ್ನು ಕೆರಳಿಸುವಂಥ ಪ್ರೇರಣಾತಾಣಗಳು. ಅದರಲ್ಲೂ ಹಿಮಾಲಯದಲ್ಲಿರುವ ತೀರ್ಥಕ್ಷೇತ್ರಗಳು ಪಾವಿತ್ರ್ಯದೊಂದಿಗೆ ಸುಂದರ ಪರಿಸರವನ್ನೂ ಹೊಂದಿವೆ. ಅಂಥ ಎರಡು ಪುನೀತ ತಾಣಗಳ ದರ್ಶನದ ತಮ್ಮ ಅನುಭವವನ್ನು ರೋಚಕವಾಗಿ ಬಿಂಬಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಸ್ತ್ರಾಧ್ಯಯನದಲ್ಲಿ ಅಪಾರ ಆಸಕ್ತಿಯನ್ನು ಹೊಂದಿರುವ ಇವರ ಹಲವಾರು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.

ದೇವಾಲಯದತ್ತ ಅಡಿಯಿಡುವವರನ್ನು ಸ್ವಾಗತಿಸುತ್ತವೆ. ದೇವಾಲಯದಲ್ಲಿ ದಿವ್ಯತ್ರಯರು ವರ್ಣರಂಜಿತ ಭಾವಚಿತ್ರಗಳ ಮೂಲಕ ನಮ್ಮನ್ನು ನಗುನಗುತ್ತ ಆಶೀರ್ವದಿಸುತ್ತಾರೆ. ಆಶ್ರಮದವರು ನಡೆಸುತ್ತಿರುವ ಬೃಹತ್ತಾದ 'ವಿವೇಕಾನಂದ ಪಾಲಿಕ್ಲಿನಿಕ್', ಲಕ್ನೋ ಪಟ್ಟಣದಲ್ಲೇ ಸುಸಜ್ಜಿತವಾಗಿದ್ದು ಪ್ರಖ್ಯಾತವಾಗಿದೆ. ಸುಮಾರು ೪೦೦ ಹಾಸಿಗೆಗಳನ್ನು ಹೊಂದಿರುವ, ಎಲ್ಲ ಬಗೆಯ ಅತ್ಯಾಧುನಿಕ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆಯ ಯಂತ್ರಗಳನ್ನೊಳಗೊಂಡ ಈ ಆಸ್ಪತ್ರೆಯ ಮಧ್ಯದಲ್ಲಿ ಸ್ವಾಮಿ ವಿವೇಕಾನಂದರ ಸುಮಾರು ಹದಿನೈದು ಅಡಿ ಎತ್ತರದ ಕಂಚಿನ ಪ್ರತಿಮೆಯಿದೆ. ಆಸ್ಪತ್ರೆಯ ಹೊರಗೆ ಇರುವ ಉದ್ಯಾನವನಗಳಲ್ಲಿ ಅಲ್ಲಲ್ಲಿ ನವಿಲುಗಳು ಗರಿಗೆದರಿ ನಿಂತಿರುವುದನ್ನೂ ಕಂಡೆ. ನಾನು ಲಕ್ನೋ ತಲುಪಿದಾಗ, ಅಲ್ಲಿನ ತಾಪಮಾನ ೪೦ ಡಿಗ್ರಿ ತೋರಿಸುತ್ತಿತ್ತು! ಅದೇ ರಾತ್ರಿ ಗೋರಖಪುರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿದೆ. ಮೇ ೪ರಂದು ಗೋರಖಪುರ ರೈಲುನಿಲ್ದಾಣದಲ್ಲಿಳಿದೆ. ನಿಲ್ದಾಣದಿಂದ ಭಾರತ–ನೇಪಾಳ ದೇಶಗಳ ಸೀಮೆಯಾದ ಸುನೌಲಿಗೆ ಬಸ್ಸು ಅಥವಾ ಟ್ಯಾಕ್ಸಿಗಳಲ್ಲಿ ಹೋಗಬಹುದು. ಟ್ಯಾಕ್ಸಿಯಲ್ಲಿ ಹೋದರೆ ಸುನೌಲಿ ಮುಟ್ಟಲು ಸುಮಾರು ಎರಡು ಗಂಟೆ ಸಾಕು. ಸಹಪ್ರಯಾಣಿಕರೊಂದಿಗೆ ಟ್ಯಾಕ್ಸಿಯನ್ನು ರೂ. ೨೫೦ಕ್ಕೆ ಹಂಚಿಕೊಂಡು ಸುನೌಲಿ ಮುಟ್ಟಿದಾಗ ಬೆಳಗ್ಗೆ ೧೦ ಗಂಟೆ. ಅಲ್ಲಿಂದ ಕಾಲ್ನಡಿಗೆಯಲಿಯೇ ಭಾರತ–ನೇಪಾಳದ ಗಡಿಯನ್ನು ದಾಟಬೇಕು. ಅಲ್ಲಿದ್ದ ಸುಂಕದಕಟ್ಟೆಯ ಅಧಿಕಾರಿಗಳು ತೆರಿಗೆ ತಪ್ಪಿಸಿ ಯಾವುದಾದರೂ ವಸ್ತುವನ್ನು ಸಾಗಿಸುತ್ತಾರೋ ಎಂದು ನಮ್ಮ ಚೀಲಗಳನ್ನು ಪರಿಶೀಲಿಸುತ್ತಾರೆ. ಹಾಗೆಯೇ ಇತ್ತೀಚೆಗೆ ಉಗ್ರಗಾಮಿಗಳು ನೇಪಾಳದಿಂದ ಸುಲಭವಾಗಿ ಭಾರತದೊಳಗೆ ಪ್ರವೇಶಿಸಬಹುದಾದ್ದರಿಂದ ಹೆಚ್ಚು ಎಚ್ಚರ ವಹಿಸುತ್ತಾರೆ. ಅಲ್ಲಿಂದ, ನೇಪಾಳದ ಭೈರಾವಾಗೆ ಅಲ್ಲಿನ ಖಾಸಗಿ ಬಸ್ಸುಗಳಲ್ಲಿ, ಸುಮಾರು ಅರ್ಧ ಗಂಟೆಯ ಪ್ರಯಾಣ. ಹ್ಹಾ! ಮರೆತೆ. ಇಲ್ಲಿ ನೇಪಾಳದ ಗಡಿಯೊಳಗೆ ಬಂದ ತಕ್ಷಣ ಭಾರತದ ನೋಟುಗಳ ಬದಲಾಗಿ ನೇಪಾಳದ ನೋಟುಗಳನ್ನು ಬದಲಿಸಿಕೊಳ್ಳಬಹುದು. ಪ್ರಸ್ತುತ ೧೦೦ ರೂಪಾಯಿಯ ಭಾರತೀಯ ನೋಟಿಗೆ ೧೬೦ ರೂಪಾಯಿಯ ನೇಪಾಳಿ ನೋಟುಗಳು. ಹಾಗಂಥ, ಅಲ್ಲಿ ಭಾರತೀಯ ನೋಟುಗಳನ್ನು ಬದಲಿಸಿಕೊಳ್ಳಲೇಬೇಕೆಂಬುದೇನೂ ಇಲ್ಲವೆಂದು ವ್ಯಾವಹಾರಿಕ ದೃಷ್ಟಿಯಿಂದ ಸಲಹೆ ನೀಡಬಹುದು. ಏಕೆಂದರೆ, ಪ್ರತಿಯೊಬ್ಬರೂ ಭಾರತೀಯ ನೋಟುಗಳನ್ನು ಸ್ವೀಕರಿಸಿಯೇ ಸ್ವೀಕರಿಸುತ್ತಾರೆ. ಆದರೆ, ಪ್ರತಿಯೊಂದು ಹಣದ ವ್ಯವಹಾರದಲ್ಲಿ "ಭಾರತೀಯ ರೂಪಾಯಿ ಎಷ್ಟು? ನೇಪಾಳಿ ರೂಪಾಯಿ ಎಷ್ಟು?" ಎಂಬ ಪ್ರಶ್ನೆಯನ್ನು ಹಾಕಿಯೇ ವ್ಯವಹಾರವನ್ನು ಮಾಡಬೇಕು. ಇಲ್ಲದೆ ಇದ್ದರೆ ಹೆಚ್ಚು ಹಣವನ್ನು ತೆರಬೇಕಾಗುತ್ತದೆ! ಅಂದಹಾಗೆ, ಇನ್ನೊಂದು ಮುಖ್ಯ ವಿಷಯ ಏನೆಂದರೆ, ನೇಪಾಳದ ಕೇಂದ್ರ ಬ್ಯಾಂಕು ಭಾರತದ ಐದುನೂರು ಹಾಗೂ ಸಾವಿರ ರೂಪಾಯಿಗಳ ನೋಟನ್ನು ಪುರಸ್ಕರಿಸದಿರುವುದರಿಂದ ಅವುಗಳು ಅಲ್ಲಿ ವರ್ಜ್ಯ! ನೇಪಾಳವನ್ನು ಹೊಕ್ಕಿದೊಡನೆಯೇ ಮೊದಲು ನನ್ನ ಕಿವಿಯನ್ನು ಪ್ರವೇಶಿಸಿದ್ದು ಕೆಲವು ಸಂಸ್ಕೃತ ಪದಗಳೊಂದಿಗೆ ಬೆರೆತಿದ್ದ ನೇಪಾಳಿ ಭಾಷೆಯ ಸೊಗಡು. ಹಿಂದಿ ಭಾಷೆ ಅಲ್ಲಿ ಧಾರಾಳವಾಗಿ ಚಲಾವಣೆಯಲ್ಲಿರುವುದರಿಂದ ಎಲ್ಲೆ ದಾಟಿದ್ದರೂ ನಮ್ಮಲ್ಲೇ ಇರುವೆನೆಂಬುದಾಗಿ ಭಾವನೆಯುಂಟಾಗುತ್ತಿತ್ತು. 'ಕೈತೋರಿದಲ್ಲಿ ನಿಲ್ಲುವೆ' ಬಸ್ಸುಗಳೇ ಅಲ್ಲಿ ಹೆಚ್ಚು! ಅಂತೂ ಕೊನೆಗೆ ಬೆಳಗ್ಗೆ ಸುಮಾರು ೧೧ ಕ್ಕೆ ಭೈರಾವಾಗೆ ಬಂದಿಳಿದೆ. ಅಲ್ಲೊಂದು ಲಾಡ್ಜ್‌ನಲ್ಲಿ ತಂಗಿ ಮುಂದಿನ ಪ್ರಯಾಣಕ್ಕೆ ಸಿದ್ಧನಾದೆ.

ಮೂರ್ತಿವೆತ್ತ ನಿರ್ವಾಣದತ್ತ: ಅದೇ ದಿನದ ಮಧ್ಯಾಹ್ನ ಅಲ್ಲಿಂದ ಸುಮಾರು ೨೨ ಕಿ.ಮೀ ದೂರದಲ್ಲಿರುವ, ಶಾಕ್ಯಸಿಂಹ ಬುದ್ಧನ ಜನ್ಮಸ್ಥಾನವಾದ ಲುಂಬಿನಿಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದೆ. ಒಂದು ಗಂಟೆಯ ಪ್ರಯಾಣದ ಬಳಿಕ ರೂಪಂದೇಹಿ ಜಿಲ್ಲೆಯಲ್ಲಿರುವ ಲುಂಬಿನಿಯ ಹೆಬ್ಬಾಗಿಲಿಗೆ ಬಸ್ಸು ತಲುಪಿತು. ಅಲ್ಲಿಂದ ಹುಲ್ಲುಹರವಿನಿಂದಲೂ, ಮರಗಳಿಂದಲೂ ಕೂಡಿದ್ದ ಒಂದು ವಿಶಾಲವಾದ ಉದ್ಯಾನವನದ ಮೂಲಕ ದೊಡ್ಡ ಕೊಳದ ದಡದ ಮೇಲಿನಿಂದ ನಡೆದುಕೊಂಡು, ಮಾಯಾದೇವಿಯ ಕೊಳದ ಪಕ್ಕದಲ್ಲಿದ್ದ ಒಂದು ಕಟ್ಟಡದ ಬಳಿ ಬಂದು ನಿಂತೆ. ಅಲ್ಲಿ ಸರಕಾರದವರು **'ಬುದ್ಧನ ಜನ್ಮಸ್ಥಳ'** ಎಂದು ಬೋರ್ಡು ಹಾಕಿದ್ದರು. ಕಟ್ಟಡದ ಪಕ್ಕದಲ್ಲಿ ಅಶೋಕನು ಸ್ಥಾಪಿಸಿದ್ದುದೆಂದು ಹೇಳಲಾದ ಕಂಬವಿತ್ತು. ಕಟ್ಟಡದ ಒಳಗೆ ಅತಿ ಪ್ರಾಚೀನವಾದ ಕಟ್ಟಡವಿತ್ತೆಂದು ಗುರುತಿಸಬಹುದಾದ ಪಳೆಯುಳಿಕೆಗಳಿವೆ. ಸುತ್ತಲೂ ಇದ್ದ ಮೂರಡಿ ಅಗಲದ ಮರದ ಹಲಗೆಗಳು ಬುದ್ಧನು ಹುಟ್ಟಿದ ಕರಾರುವಕ್ಕಾದ ಜಾಗಕ್ಕೆ ನಮ್ಮನ್ನು ಒಯ್ಯುತ್ತವೆ. ಅಲ್ಲಿ ಗಾಜಿನಿಂದ ಸಂರಕ್ಷಿಸಲ್ಪಟ್ಟ ಸ್ಥಳವಿದೆ. ಅದೇ ಜಗತ್ತಿಗೆ ನಿರ್ವಾಣದ ಗುಟ್ಟನ್ನು ಬೋಧಿಸಿದ ಕರುಣಾಮೂರ್ತಿಯಾದ ಬುದ್ಧನು ಹುಟ್ಟಿದ ಸ್ಥಳವೆಂದು ಹೇಳುತ್ತಾರೆ. ಅಲ್ಲಿ ಸ್ವಲ್ಪ ಹೊತ್ತು ಧ್ಯಾನದಲ್ಲಿ ಕುಳಿತುಕೊಂಡು ಹೊರಗೆ ಬಂದೆ. ಆ ಮಹಾನ್ ಚೇತನದ ಹುಟ್ಟಿನಿಂದ ಮಹಾಪರಿನಿರ್ವಾಣದ ತನಕ ಆಗಿಹೋದ ಮುಖ್ಯ ಘಟನೆಗಳೆಲ್ಲ ಮನಸ್ಸಿನ ಮುಂದೆ ಸರಿದುಹೋದವು. ಜಗತ್ತಿನ ಹಿತಕ್ಕೋಸ್ಕರ ಮತ್ತು ಆತ್ಮಹಿತಕ್ಕೋಸ್ಕರ ಆತನು ನೀಡಿದ

ತ್ಯಾಗ, ಪ್ರೀತಿ ಮತ್ತು ಅಹಿಂಸೆಯ ಸಂದೇಶವನ್ನು ಅಲ್ಲಿ ಮತ್ತೆ ಮನಸ್ಸಿಗೆ ತಂದುಕೊಳ್ಳುವಂತೆ ಆಯಿತು. ಅಲ್ಲಿ ಜಗತ್ತಿನ ಬೇರೆ ಬೇರೆ ರಾಷ್ಟ್ರದವರು ಬುದ್ಧನಿಗೆ ತಮ್ಮದೇ ಆದ ಶೈಲಿಯಲ್ಲಿ ಅನೇಕ ಮಂದಿರಗಳನ್ನೂ, ಬೌದ್ಧಸಂನ್ಯಾಸಿಗಳು ವಾಸಿಸಲು ಅನುಕೂಲವಾಗುವಂತೆ ವಿಹಾರಗಳನ್ನೂ ನಿರ್ಮಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಒಳಹೊಕ್ಕು ನೋಡಿದ ನಂತರ ರಸ್ತೆಗೆ ಬಂದು, ಪುನಃ ಬಸ್ಸು ಹಿಡಿದು ಭೈರಾವಾಗೆ ಹಿಂತಿರುಗಿದೆ. ಮಾರನೇ ದಿವಸ ಅಲ್ಲಿಂದ ಪೋಖರಾಗೆ ಹೋಗುವುದಕ್ಕಾಗಿ ಬಸ್ ಟಿಕೆಟ್ ಅನ್ನು ಮುಂಗಡವಾಗಿಯೇ ಖರೀದಿಸಿದೆ.

ಪೋಖರಾದಿಂದ ಜೋಮ್‌ಸೋಮ್: ಮೇ ೫ ನೆ ತಾರೀಖು ಬೆಳಗ್ಗೆ ೫ ಗಂಟೆಯ ಬಸ್ಸಿನಲ್ಲಿ ಕುಳಿತೆ. ಭರತಪುರ (ಪ್ರಸಿದ್ಧ ಪಕ್ಷಿಧಾಮ) ಹಾಗೂ ಬುಟ್‌ವಲಿನ ದಾರಿಯಾಗಿ ಬಸ್ಸು ಸಾಗುತ್ತಿತ್ತು. ಇಕ್ಕೆಲಗಳಲ್ಲಿಯೂ 'ಹಸಿರು ವನಶ್ರೀ' ತನ್ನ ಸೌಂದರ್ಯವನ್ನು ಪ್ರಯಾಣಿಕರಿಗೆ ಉಣಬಡಿಸುತ್ತಿತ್ತು. ಸುಮಾರು ೮ ಗಂಟೆಗಳು ಸರ್ಪಾಕಾರದ ರಸ್ತೆಯಲ್ಲಿ ಪ್ರಯಾಣ ಮಾಡಿ ಮಧ್ಯಾಹ್ನ ಪೋಖರಾ ನಗರಕ್ಕೆ ಬಂದೆವು. ಇದೊಂದು ಪ್ರೇಕ್ಷಣೀಯ ಸ್ಥಳ. ಇಲ್ಲಿನ ಫೇವಾ ಸರೋವರ ಬಹಳ ದೊಡ್ಡ ಸರೋವರ. ಅದರ ಮಧ್ಯದಲ್ಲಿ ವಾರಾಹಿ ದೇವಿಯ ದೇವಸ್ಥಾನವಿದೆ. ದೋಣಿಯಲ್ಲಿಯೇ ಆ ದೇವಾಲಯಕ್ಕೆ ಭೇಟಿ ನೀಡಬೇಕು. ವಿಂಧ್ಯವಾಸಿನಿ ದೇವಾಲಯ, ವಿಶ್ವಶಾಂತಿ ಪಗೋಡಾ, ಸೇತಿ(ಬಿಳಿ ಬಣ್ಣದ) ಗಂಡಕಿ, ಡೇವಿಸ್ ಫಾಲ್ಸ್, ಗುಪ್ತೇಶ್ವರ ಮಹಾದೇವ ಗುಹೆ, ಸ್ಥಳೀಯ ಗುಡ್ಡಗಾಡು ಜನಾಂಗದ ಸಂಸ್ಕೃತಿಯನ್ನು ತಿಳಿಸುವ ವಸ್ತುಸಂಗ್ರಹಾಲಯ, ಮಹೇಂದ್ರ ಗುಫಾ (ಗುಹೆ) – ಇವು ಇಲ್ಲಿರುವ ಇನ್ನಿತರ ಕೆಲವು ಪ್ರೇಕ್ಷಣೀಯ ಸ್ಥಳಗಳು. ಅನೇಕ ಪರ್ವತಾರೋಹಿಗಳನ್ನು ಆಕರ್ಷಿಸುವ ಪ್ರಸಿದ್ಧ ಮಾಛಾಪುಛ್ರೆ (ಮೀನಿನ ಬಾಲದಾಕಾರದ ಹಿಮದ ಬೆಟ್ಟ) ಮತ್ತು ಪಾರಾಗ್ಲೈಡಿಂಗ್‌ಪ್ರಿಯರ ಸ್ವರ್ಗವಾದ ಸಾರಂಗ್‌ಕೋಟ್ ಇಲ್ಲಿಗೆ ಬಹಳ ಹತ್ತಿರವಿರುವ ಆಕರ್ಷಣೀಯ ತಾಣಗಳು. ಆ ದಿನ ಪೋಖರಾದ ವಸತಿಗೃಹವೊಂದರಲ್ಲಿ (ಫೇವಾ ಸರೋವರದ ಹತ್ತಿರ) ಉಳಿದುಕೊಂಡೆ. ಯಾತ್ರಿಗಳ ತಾಣವಾದ್ದರಿಂದ ಪೊಖರಾ ಹಾಗೂ ಕಾಟ್‌ಮಂಡು ನಗರಗಳು ಬಹಳ ದುಬಾರಿ. ಇಲ್ಲಿ ಎಲ್ಲದಕ್ಕೂ ಚೌಕಾಸಿ ಮಾಡಬೇಕಾಗುತ್ತದೆ. ಜನರು ಸುಹೃದಯಿಗಳು. ಸಹಾಯ ಮಾಡಲು ತಯಾರು. ಕಳ್ಳತನ ಇಲ್ಲವೇ ಇಲ್ಲ ಎನ್ನುವಷ್ಟು ಬಹಳ ಕಡಿಮೆ. ಮುಕ್ತಿನಾಥಕ್ಕೆ ಹೋಗಬೇಕಾದರೆ ಇಲ್ಲಿಂದ ಜೋಮ್‌ಸೋಮಿಗೆ ಹೋಗಬೇಕು. ಮೂರು ರೀತಿಯಲ್ಲಿ ಪ್ರಯಾಣ ಮಾಡಬಹುದು. ಒಂದು ಕಾಲ್ನಡಿಗೆಯಲ್ಲಿ, ಸುಮಾರು ಆರೇಳು ದಿನಗಳ ನಡಿಗೆ. ಮಧ್ಯೆ ಇರುವ ಅನೇಕ ವಸತಿಗೃಹಗಳಲ್ಲಿ ಉಳಿದುಕೊಂಡು ವಿಶ್ರಾಂತಿ ಪಡೆಯುತ್ತ ಸಾಗುವ ಹಾದಿ. ಇನ್ನೊಂದು, ಅದೇ ರಸ್ತೆಯಲ್ಲಿ ಬಸ್ಸು ಹಾಗೂ ಜೀಪುಗಳಲ್ಲಿ ಬೇಣಿ ಹಾಗೂ ಗಾಜ್ರಾಗಳ ಮುಖಾಂತರ ಹೋಗಬಹುದು. ಮಧ್ಯದಲ್ಲಿ, ಮ್ಯಾಗ್ದಿಯೆಂಬಲ್ಲಿ ಪ್ರಸಿದ್ಧವಾದ ಗಾಲೇಶ್ವರ ಶಿವನ ದರ್ಶನವನ್ನೂ ಮಾಡಬಹುದು. ಇದನ್ನು ಅಲ್ಲಿನ ಸ್ಥಳೀಯರು 'ಜ್ಯೋತಿರ್ಲಿಂಗ'ವೆಂದು ಕರೆಯುತ್ತಾರೆ. ಈ ಮಾರ್ಗದಿಂದ ನಸುಕಿನಲ್ಲೇ ಪೋಖರಾದಿಂದ ವಾಹನದಲ್ಲಿ ಪ್ರಯಾಣ ಮಾಡಿ ಅದೇ ದಿನ ರಾತ್ರಿ ಜೋಮ್‌ಸೋಮ್ ಮುಟ್ಟಬಹುದು; ಅಥವಾ ಮಧ್ಯದ ಗಾಜಾದಲ್ಲಿ ಆ ರಾತ್ರಿ ತಂಗಿದ್ದು ಮರುದಿನ ಜೋಮ್‌ಸೋಮ್ ಮುಟ್ಟಬಹುದು. ಮತ್ತೊಂದು ಮಾರ್ಗ ವಾಯುಮಾರ್ಗ. ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ಒಬ್ಬರಿಗೆ ಬಸ್ಸಿನ ಖರ್ಚು ಭಾ. ರೂ (ಭಾರತೀಯ ರೂಪಾಯಿ) ೧,೫೦೦ ರಷ್ಟು ಆಗುತ್ತದೆ. ಒಂದು ದಿನದ ಆಹಾರದ ಖರ್ಚು ಒಬ್ಬರಿಗೆ ಭಾ.ರೂ. ೩೦೦ ಆಗಬಹುದು. ಕಾಲ್ನಡಿಗೆಯಲ್ಲಿ ಹೋದರೂ ಕಡಿಮೆಯೇನೂ ಖರ್ಚಿಲ್ಲ. ಐದು ರಾತ್ರಿಗಳ ವಸತಿಗೆ ಪ್ರತಿ ರಾತ್ರಿ ಭಾ.ರೂ ೨೫೦ ಬಾಡಿಗೆ ಮತ್ತು ಪ್ರತಿ ದಿನ ಭಾ. ರೂ. ೩೦೦ ಊಟದ ಖರ್ಚು ಎಲ್ಲ ಸೇರಿ ಸುಮಾರು ೩೦೦೦ ಭಾ. ರೂ. ಗಳಾಗುತ್ತವೆ (ಈ ಖರ್ಚುಗಳೆಲ್ಲವೂ, ನಾವು ಹೇಗೆ ಸ್ಥಳೀಯರ ಜೊತೆಗೆ ಚೌಕಾಸಿ ಮಾಡುತ್ತೇವೆ ಎಂಬುದರ ಮೇಲೆ ಆಧರಿಸಿದೆ). ನಾನು ವಾಯುಮಾರ್ಗವನ್ನೇ ಆರಿಸಿಕೊಂಡೆ. ಈಗ ಒಂದು ಕಡೆ ವಿಮಾನ ಪ್ರಯಾಣಕ್ಕೆ ಭಾ.ರೂ ೪,೪೦೦ ಬೇಕು. ಮೇ ೬ರ ಬೆಳಗ್ಗೆ ೮.೩೦ಕ್ಕೆ ೨೦ ಪ್ರಯಾಣಿಕರನ್ನು ಹತ್ತಿಸಿಕೊಂಡು ಯೇತಿ ಏರಲೈನ್ಸ್ ಸುಮಾರು ಅರ್ಧ ಗಂಟೆಯ ಹಾರಾಟ ಮಾಡಿ ಜೋಮ್‌ಸೋಮನ್ನು ಮುಟ್ಟಿತು. ವಿಮಾನದ ಕಿಟಕಿಯಿಂದ ನೋಡನೋಡುತ್ತಿದ್ದಂತೆ ಭೂಮಿ ದೂರವಾಯಿತು, ಮನೆ–ಮರಗಳು ಕಿರಿದಾದವು. ಬಿಳಿ ಬಣ್ಣದ ಗಂಡಕಿ ನದಿ ಹಸಿರು ಮರಗಳ ಮಧ್ಯೆ ದಾರಿ ಮಾಡಿಕೊಂಡು ವೇಗವಾಗಿ ಎಲ್ಲಿಗೋ ನುಗ್ಗುತ್ತಿರುವ ದೃಶ್ಯ, ಯಾವುದೇ ಹಸಿರಿನ ತೇಪೆಯಿರದ ದೊಡ್ಡ ದೊಡ್ಡ ಬೋಳುಬೆಟ್ಟಗಳು, ಹಿಮದಿಂದ ಮೀಯುತ್ತಿದ್ದ ಪರ್ವತ ಶಿಖರಗಳ ಮೇಲೆ ದಿನಕರನ ಕರಸ್ಪರ್ಶ, ಆಗಾಗ ಅವುಗಳ ದೂತರೋ ಎಂಬಂತೆ 'ಹಾರುವ ಹಕ್ಕಿ'ಗಳಲ್ಲಿ ಪ್ರಯಾಣಿಸುತ್ತಿರುವವರು ಯಾರೋ ಎಂದು ನೋಡಲು ಪಕ್ಕದಲ್ಲಿ ಹಾದು ಹೋಗುತ್ತಿದ್ದಂತಿದ್ದ ಬಿಳಿ ಮೋಡಗಳ ಸಾಲುಗಳು – ಹೀಗೆ ಈ ಎಲ್ಲ ದೃಶ್ಯಗಳೂ ಕೆಳಹಂತದಲ್ಲಿರುತ್ತಿದ್ದ ನಮ್ಮ ನೋಟದ ಆಯಾಮವನ್ನು ಬದಲಿಸಿ ಮೇಲ್ಮಟ್ಟಕ್ಕೇರಿಸಿ, ಸಂತೋಷವನ್ನೀಯುತ್ತಿದ್ದವು. ಈ ದೃಶ್ಯಾವಳಿಗಳು ನಮ್ಮ ದೃಷ್ಟಿ ಮೇಲ್ಮಟ್ಟದಲ್ಲಿದ್ದರೆ ಕೆಳಮಟ್ಟದ ಸಮಸ್ಯೆಗಳು ನಗಣ್ಯವಾಗಿಬಿಡುತ್ತವೆ ಎಂಬ ಸಂದೇಶವನ್ನು ನೀಡುತ್ತಿರುವಂತೆ ಕಂಡಿತು. ಜೋಮ್‌ಸೋಮಿನ ವಿಮಾನ ನಿಲ್ದಾಣ ಹಿಮವತ್ಪರ್ವತಗಳ ಪಕ್ಕದಲ್ಲಿದ್ದುದರಿಂದ ಬಹು ರಮ್ಯವಾಗಿತ್ತು.

ಮುಕ್ತಿನಾಥನ ಸನ್ನಿಧಿಗೆ: ಮುಕ್ತಿನಾಥನ ಸನ್ನಿಧಿಗೆ ಹೋಗುವ ಯಾತ್ರಿಗಳ ತಂಗುದಾಣವಾಗಿ ನಿರ್ಮಾಣಗೊಂಡಿದೆ ಮುಸ್ತಾಂಗ್ ಜಿಲ್ಲೆಯ ಜೋಮ್‌ಸೋಮ್ (ಅದರರ್ಥ ಹೊಸಕೋಟೆ). ಕಾಳಿ ಗಂಡಕಿಯ ದಡದ ಮೇಲೆ ಅನೇಕ ವಸತಿಗೃಹಗಳು, ಅಂಗಡಿ, ಹೊಟೆಲ್ಲುಗಳಿಂದ ಕೂಡಿರುವ ಊರು ಇದು. ಇಲ್ಲಿಂದ ಮೇಲೆ ಮೇಲೆ ನಾವು ಹೋದಂತೆ

ಟಿಬೆಟ್ ಬೌದ್ಧಧರ್ಮದ ಸಂಸ್ಕೃತಿಯನ್ನು ಹೆಚ್ಚು ಹೆಚ್ಚು ಕಾಣುತ್ತೇವೆ. ಇಲ್ಲಿಂದ ಮುಕ್ತಿನಾಥಕ್ಕೆ ಕಾಲ್ನಡಿಗೆಯಲ್ಲಿ ಆರು ಗಂಟೆ ಬೇಕು. ಜೀಪಿನಲ್ಲಿ ೧೪ ಜನರನ್ನು ತುಂಬಿಸಿ ಕರೆದು ಕೊಂಡು ಹೋಗುತ್ತಾರೆ. ಒಂದೂವರೆ ಗಂಟೆ ಪ್ರಯಾಣ. ರಾಣಿಪಾವುವಾ (ಮುಕ್ತಿನಾಥವಿರುವ ಊರಿನ ಹೆಸರು) ಮುಟ್ಟಲು. ಭಾ. ರೂ. ೩೫೦ ಅನ್ನು ಒಬ್ಬ ಪ್ರಯಾಣಿಕನಿಂದ ತೆಗೆದುಕೊಳ್ಳುತ್ತಾರೆ. ಕೌಂಟರ್‌ನಲ್ಲಿ ಜೀಪಿನ ಪ್ರಯಾಣಕ್ಕೆ ಟಿಕೆಟ್ ಕೊಂಡು ಜೀಪು ತುಂಬುವವರೆಗೂ ಕಾದೆ. ಸುಮಾರು ಒಂದು ಗಂಟೆ ಕಾದ ನಂತರ ಜೀಪು ಗಂಡಕಿಯ ದಡದ ಮೇಲೆ ಮಾಡಿದ ಕಚ್ಚಾ ರಸ್ತೆಯಲ್ಲಿ ಹೊರಟಿತು. ಇಲ್ಲಿಂದ ಮುಂದೆ ನಮಗೆ ಕಾಣಸಿಗುವುದು ಕೇವಲ ಬೋಳು ಪರ್ವತಗಳು ಮತ್ತು ಹಿಮಭರಿತ ಶೃಂಗವನ್ನು ಹೊಂದಿದ ಪರ್ವತಗಳ ಸುಂದರ ನೋಟ. ಮಧ್ಯಾಹ್ನ ಹನ್ನೆರಡು ಗಂಟೆಗೆ ಜೀಪು ರಾಣಿಪಾವುವಾ ತಲುಪಿತು. ಇಲ್ಲಿಯೇ ಯಾತ್ರಿಗಳು ತಂಗಬೇಕು. ಅನೇಕ ವಸತಿಗೃಹಗಳು ಇವೆ. ಭಾರತ ಹಾಗೂ ನೇಪಾಳ ಸರ್ಕಾರದವರು ಜಂಟಿಯಾಗಿ ಹೊಸದಾಗಿ ನಿರ್ಮಿಸಿರುವ ಸುಸಜ್ಜಿತ ಯಾತ್ರಿನಿವಾಸವೂ ಇಲ್ಲಿದೆ. ಇಲ್ಲಿಂದಲೇ ನಮಗೆ ಮುಕ್ತಿನಾಥದ ಹೆಬ್ಬಾಗಿಲು ಕಾಣಿಸುತ್ತದೆ. ಇಲ್ಲಿಂದ ದೇವಾಲಯದ ಹೆಬ್ಬಾಗಿಲಿನವರೆಗೂ ಮೋಟರ್‌ಬೈಕ್ ಸವಾರರು ಪ್ರತಿ ಸವಾರಿಗೆ ಭಾ.ರೂ. ೧೫೦ ರಂತೆ ತೆಗೆದುಕೊಂಡು, ತಮ್ಮ ಹಿಂದೆ ಬೈಕಿನಲ್ಲಿ ಕೂಡಿಸಿಕೊಂಡು ಕರೆದುಕೊಂಡು ಹೋಗಿಬಿಡುವರು. ಮುದುಕರು, ಮಕ್ಕಳು, ಯಾರು ಮೆಟ್ಟಿಲು ಹತ್ತಿ ಹೋಗಲೊಲ್ಲರೊ, ಅವರಿಗಾಗಿ ಈ ವ್ಯವಸ್ಥೆ. ಮೊದಲು ತೀರ್ಥದ ದರ್ಶನ ಮಾಡುವ ತವಕ ವಿದ್ದುದರಿಂದ ಯಾವುದೇ ವಸತಿಗೃಹಕ್ಕೆ ಹೋಗದೆ ನೇರವಾಗಿ ಹೆಬ್ಬಾಗಿಲಿನವರೆಗೂ ಮೆಟ್ಟಿಲು ಹತ್ತಲು ಆರಂಭಿಸಿದೆ. ಅಲ್ಲಿ, ಆಮ್ಲಜನಕದ ಸಾಂದ್ರತೆ ಕಡಿಮೆ ಇರುವುದರಿಂದ ಮೇಲೆ ಮೇಲೆ ಹತ್ತುತ್ತಿದ್ದಂತೆ ಉಸಿರು ಜಾಸ್ತಿ ಎಳೆದುಕೊಳ್ಳಬೇಕು. ಜೊತೆಯಲ್ಲಿ ನನ್ನ ಲಗೇಜು ಬೇರೆ! ಬೆಟ್ಟ ಹತ್ತುವಾಗ ಒಂದು ಕೆ.ಜಿ ತೂಕವೂ ಹತ್ತು ಕೆ.ಜಿ ತೂಕಕ್ಕೆ ಸಮವಾಗಿ ಕಂಡುಬರುತ್ತದೆ! ಇನ್ನು ಹತ್ತು ಕೆ.ಜಿ....?! ಇದೊಂದು ದೊಡ್ಡ ಸಂಸಾರ ಅಂದುಕೊಂಡೆ! ಆದರೆ, ವಿಧಿಯಿಲ್ಲವಲ್ಲ! ಮೆಟ್ಟಿಲುಗಳೂ ಸಮವಾಗಿಲ್ಲ. ಸ್ವಲ್ಪ ಹತ್ತುವುದು, ಅಲ್ಲೇ ನಿಂತು ಸುಧಾರಿಸಿಕೊಳ್ಳುವುದು, ಹೀಗೆ ಸಾಗಿತ್ತು ನನ್ನ ಏರಿನ ಪ್ರಯಾಣ. ಸುತ್ತಲೂ ಎಲ್ಲೆಡೆ ತಲೆಯೆತ್ತಿ ಬಿಳಿಬಾಹುಗಳಿಂದ ತಬ್ಬುವಂತಿದ್ದ ಪರ್ವತಗಳು ಆಯಾಸವನ್ನು ಮರೆಸಿ ಪ್ರೋತ್ಸಾಹ ನೀಡುತ್ತಿದ್ದವು.

ಸುಮಾರು ಅರ್ಧ ಗಂಟೆ ಏರಿದ ಮೇಲೆ ಹೆಬ್ಬಾಗಿಲು ಕಾಣಿಸಿತು. ಅಲ್ಲಿ ಮುಕ್ತಿನಾಥ ಕ್ಷೇತ್ರಕ್ಕಿರುವ ಇನ್ನೊಂದು ಹೆಸರನ್ನೂ ಬರೆದಿದ್ದರು 'ಚ್ಯುಮಿಗ್‌ಗ್ಯಾಟ್ಸಾ'. ಹೇಗೆ ಮುಕ್ತಿ ನಾಥವು ಶ್ರೀವೈಷ್ಣವರ ೧೦೮ ದಿವ್ಯದೇಶಗಳಲ್ಲಿ ೧೦೫ಯದಾದ ತಿರುಸಾಲಿಗ್ರಾಮವೊ, ಹಾಗೆಯೇ ಟಿಬೆಟ್‌ನ ಬೌದ್ಧರಿಗೆ, 'ನೂರು ನೀರಿನ' (ಚ್ಯುಮಿಗ್‌ಗ್ಯಾಟ್ಸಾ) ಪವಿತ್ರ ಪ್ರದೇಶ. ಟಿಬೆಟನ್ ಬೌದ್ಧಧರ್ಮದ ಸ್ಥಾಪಕನಾದ ಪದ್ಮಸಂಭವನು ಟಿಬೆಟ್‌ಗೆ ಹೋಗುವ ಹಾದಿಯಲ್ಲಿ ಈ ಕ್ಷೇತ್ರದಲ್ಲಿ ಧ್ಯಾನ ಮಾಡಿದ್ದನೆಂಬುದಾಗಿ ಬೌದ್ಧರ ನಂಬಿಕೆ. ಹೀಗಾಗಿ ಇದು ಹಿಂದೂಗಳು ಹಾಗೂ ಬೌದ್ಧರಿಬ್ಬರಿಗೂ ಪವಿತ್ರ ತೀರ್ಥ ಕ್ಷೇತ್ರವಾಗಿದೆ.

ಹಿಂದೂ ಹಿನ್ನೆಲೆ: ತೀರ್ಥಕ್ಷೇತ್ರಗಳು ಶ್ರದ್ಧಾಕೇಂದ್ರಗಳಾದ್ದರಿಂದ ಅಲ್ಲಿಗೆ ವಿಹಾರಪ್ರವಾಸದ (picnic) ಉದ್ದೇಶದಿಂದ ಭೇಟಿ ಕೊಡುವುದು ಸರಿಯಲ್ಲ. ನಮ್ಮಲ್ಲಿರುವ ಭಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಆ ಕ್ಷೇತ್ರಗಳ ಮಾಹಾತ್ಮ್ಯವನ್ನು ಮೆಲುಕು ಹಾಕುತ್ತ ಆದಷ್ಟು ಸಮಯ ಅಲ್ಲಿ ಜಪ-ಧ್ಯಾನ ಗಳಲ್ಲಿ ಕಳೆಯುವುದು ಒಳ್ಳೆಯದು. ಹೀಗಾಗಿ ಕ್ಷೇತ್ರದ ಮಹಿಮೆ ಯನ್ನು, ಚರಿತ್ರೆಯನ್ನು ಅಲ್ಲಿಗೆ ಹೋಗುವ ಮೊದಲೇ ಓದಿಕೊಂಡು ಮನನಮಾಡಿಕೊಂಡಿದ್ದರೆ ಸೂಕ್ತ ತಯಾರಿ ಮಾಡಿದಂತೆಯೇ. ತೀರ್ಥಕ್ಷೇತ್ರಗಳಿಗೆ ಹೋಗುವವರಿಗೆ ನನ್ನ ವೈಯಕ್ತಿಕ ಮನವಿ ಏನೆಂದರೆ, 'ದಯ ವಿಟ್ಟು ತೀರ್ಥಕ್ಷೇತ್ರದ ಪಾವಿತ್ರ್ಯವನ್ನು ಕಾಪಾಡಿ; ಅಲ್ಲಿನ ನದಿಗಳ ನೀರನ್ನು ಕೊಳಕು ಮಾಡಬೇಡಿ; ಅಲ್ಲಿರುವ ಮರ-ಗಿಡಗಳನ್ನು ಕತ್ತರಿಸದಿರಿ; ಅಲ್ಲಿ ಪ್ಲಾಸ್ಟಿಕ್ ಎಸೆದು ಪರಿಸರದ ನಾಶಕ್ಕೆ ಕಾರಣರಾಗದಿರಿ; ಅಲ್ಲಿನ ಸ್ಥಳೀಯ ಜನರೊಂದಿಗೆ ಒರಟಾಗಿ ವರ್ತಿಸದಿರಿ; ಬೆಟ್ಟಗಳನ್ನು ಹತ್ತುವಾಗ, ನದಿಯ ನೀರಿನಲ್ಲಿ, ಕಾಡಿನಲ್ಲಿ ನಡೆಯುವಾಗ ದುಃಸಾಹಸಕ್ಕೆ ಕೈಹಾಕದಿರಿ. ಸ್ಥಳೀಯ ಕ್ಷೇತ್ರಗಳಲ್ಲಿ ಯಥಾಶಕ್ತಿ ಉದಾರವಾಗಿ ದಾನ ಮಾಡಿ." (ಮುಂದುವರೆಯುವುದು)

ಮುಕ್ತಿನಾಥ ದೇವಸ್ಥಾನ